ಶ್ರೀ ಹೆಚ್.ಸಿ.ಮಹದೇವಪ್ಪ:– ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಿರತಕ್ಕಂಥ ನೇಮಕಾತಿಗಳು ಅದರ ಬಗ್ಗೆ calling attention ಕೊಟ್ಟಿದ್ದೆ, ತಾವು ನಿಯಮ 69ರಲ್ಲಿ ಅವಕಾಶ ಕೊಡುವುದಾಗಿ ಹೇಳಿದ್ದಿರಿ, ಇವತ್ತು ಕೊನೆ ದಿವಸ ನಿನ್ನೆ ಪ್ರಜಾವಾಣಿಯಲ್ಲಿ..

ಅಧ್ಯಕ್ಷರು:–ನೀವು calling attention ಕೊಟ್ಟಿದ್ದೀರಿ, ಆಯಿತು, ನಮಗೆ ಅರ್ಧಗಂಟೆ ಚರ್ಚೆ ಅವಕಾಶವನ್ನು ಕೊಡುತ್ತೇನೆ. ಈಗ ನಮ್ಮ ಉಪಮುಖ್ಯಮಂತ್ರಿಗಳು ಬಂದಿದ್ದಾರೆ, ಹೈದರಾಬಾದ್ ಕರ್ನಾಟಕಕ್ಕೆ ಉತ್ತರ ಕೊಟ್ಟು ಬಿಡಲಿ, ಹೇಗಿದ್ದರೂ ಇವರು ಬರುತ್ತಾರೆ, ಇವರ ಉತ್ತರ ಮುಗಿದ ಮೇಲೆ ಅವರು ಪ್ರಾರಂಭಿಸಲಿ, ಉತ್ತರ ಆಗಿಹೋಗಲಿ, ಉಪಮುಖ್ಯಮಂತ್ರಿಗಳ ಬಂದಿದ್ದಾರೆ. ಆಮೇಲೆ ಡಿ.ಕೆ.ಶಿವಕುಮಾರ್‌ರವರು ಚರ್ಚೆಯನ್ನು ಆರಂಭ ಮಾಡಲಿ. ನಂಜುಂಡಪ್ಪ ವರದಿಯ ಬಗ್ಗೆ ಉಪಮುಖ್ಯಮಂತ್ರಿಗಳು ಉತ್ತರ. ಕೊಡಿ.

ಶ್ರೀ ಎನ್.ಧರಂಸಿಂಗ್: ನಂಜುಂಡಪ್ಪ ವರದಿ ಪಾವಗಡ, ಶಿರಾ, ಚಾಮರಾಜನಗರ, ಗೌರಿಬಿದನೂರಿಗೆ ಬರುತ್ತದೆ. ಎಲ್ಲಾ ಸಮಸ್ತ ಕರ್ನಾಟಕ ಅಭಿವೃದ್ಧಿ ಬಗ್ಗೆ ಹೇಳಿದ್ದಾರೆ. ಹೈದರಾಬಾದ್ ಕರ್ನಾಟಕ್ಕೆ ಸೀಮಿತವಾಗಿಲ್ಲ.

ಐ) ವಿಷಯ:– ಜಮ್ಮಾ ಬಾಣೆ ವಿಚಾರಕ್ಕೆ ಸಂಬಂಧಿಸಿದಂತೆ ಮೂರು ಸುತ್ತೋಲೆಗಳನ್ನು ವಾಪಾಸ್ಸು ಪಡೆಯುವ ಬಗ್ಗೆ.

ಶ್ರೀ ಹೆಚ್.ಡಿ.ಬಸವರಾಜು: ಅಧ್ಯಕ್ಷರೇ, ಒಂದು ವಿಚಾರವನ್ನು ನಮ್ಮ ಗಮನಕ್ಕೆ ತರುತ್ತಿದ್ದೇನೆ., ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಜಮ್ಮಾ ಬಾಣೆ ವಿಚಾರಕ್ಕೆ ಸಂಬಂಧಿಸಿದಂತೆ ಮೂರು ಸುತ್ತೋಲೆಗಳನ್ನು ವಾಪಾಸ್ಸು ಪಡೆಯುವುದಾಗಿ ಹೇಳಿದರು. ಇವತ್ತು 7ನೇ ತಾರೀಖು.

ಅಧ್ಯಕ್ಷರು: ನಿನ್ನೆ ಪ್ರಸ್ತಾಪವಾಗಿದೆ ಅದನ್ನು ವಾಪಾಸ್ಸು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಸಂಸದೀಯ ಸಚಿವರು ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು: ಭಾನುವಾರದ ದಿವಸ ನನ್ನ ತಾಲ್ಲೂಕಿನಲ್ಲಿ ಬೃಹತ್ ಸಭೆಯಾಗಿದೆ. ಒಂದು ನಿಮಿಷ, ನಮಗೆ ಒಂದು ನಿಮಿಷ ಅವಕಾಶ ಮಾಡಿಕೊಡುವುದಿಲ್ಲ ಹೇಗೆ? ನಾನು ಈ ನಡುವೆ ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ. ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು:– ಒಂದು ನಿಮಿಷ ಅವಕಾಶ ಕೊಡುವುದಕ್ಕೆ ಏನು ಅಭ್ಯಂತರವಿಲ್ಲ, ಆದರೆ ಆ ವಿಷಯ ನಿನ್ನೆ ಪ್ರಸ್ತಾಪವಾಗಿದೆ ನೀವಿರಲಿಲ್ಲ.

ಶ್ರೀ ಹೆಚ್.ಡಿ.ಬಸವರಾಜು:– ಪ್ರಸ್ತಾಪದ ಪ್ರಶ್ನೆಯಲ್ಲ. ಪ್ರಸ್ತಾಪ ಆಗಿ ಮುಂದೇನಾಗಿದೆಯೆಂಬುದನ್ನು ಈ ಸದನಕ್ಕೆ ತಮ್ಮ ಮೂಲಕ ತರಲು ಬಯಸುತ್ತೇನೆ. ಇವತ್ತು ಸುತ್ತೋಲೆಯನ್ನು ವಾಪಾಸ್ಸು ಪಡೆಯಲಿಕ್ಕೆ ಗೌರವಾನ್ವಿತ ಮುಖ್ಯಮಂತ್ರಿಗಳು ಈ ಒಂದು ಸದನದಲ್ಲಿ ಹೇಳಿಕೆಯನ್ನು ಕೊಟ್ಟರು. ಹೇಳಿಕೆಯನ್ನು ಕೊಟ್ಟು 13 ದಿವಸಗಳಾಯಿತು. 13 ದಿವಸಗಳಾದರೂ ಸಹಿತ ಆ ಸುತ್ತೋಲೆ ವಾಪಾಸ್ಸು ಪಡೆದಿಲ್ಲ. ಇವತ್ತು ಕೊಡಗಿನಲ್ಲಿ ಮತ್ತೆ ಇನ್ನೊಂದು ರೀತಿಯ ಸಂದೇಹ..

ಅಧ್ಯಕ್ಷರು: 12.30 ಗಂಟೆಗೆ ಮುಖ್ಯಮಂತ್ರಿಗಳು ಬರುತ್ತಾರೆ. ಆಗ ನಿಮ್ಮ ಪ್ರಶ್ನೆಗೆ ಉತ್ತರಿಸಿ ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್:– ಪ್ರಶ್ನೆ ಏನಿಲ್ಲ, ಸುತ್ತೋಲೆಯನ್ನು ವಾಪಸ್ಸು ಪಡೆದಿದ್ದೇವೆಂದು ಹೇಳೀಕೆ ಕೊಟ್ಟರೆ ಸಾಕು.

ಅಧ್ಯಕ್ಷರು: ಅವರು ಬರಲಿ. ಆಗ ಪ್ರಸ್ತಾಪ ಮಾಡೋಣ. ಅವರು ಬರಲಿ ಕೇಳೋಣ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಇದು ಪ್ರಶ್ನೆಯಲ್ಲ ಅಧ್ಯಕ್ಷರೇ, ವಾಪಸ್ಸು ಪಡೆಯುತ್ತೇವೆ ಎಂದು ಹೇಳುತ್ತಿದ್ದಾರೆ ವಿನಃ ಏನೂ ಕಾರ್ಯಗತವಾಗಿಲ್ಲ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ಮಾನ್ಯ ಕಂದಾಯ ಸಚಿವರು ಇಲ್ಲೆ ಇದ್ದಾರೆ. ಅವರ ಇಲಾಖೆಯಿಂದ ಇದನ್ನು with draw ಮಾಡಿಕೊಳ್ಳಬೇಕು.

ಶ್ರೀ ಹೆಚ್.ಡಿ.ಬಸವರಾಜ್:– ಇಬ್ಬರೂ ಸಚಿವರು ಇಲ್ಲೆಯೇ ಇದ್ದಾರೆ, ಕಂದಾಯ ಸಚಿವರು, ಅರಣ್ಯ ಸಚಿವರು ಇಲ್ಲಿದ್ದಾರೆ, ಆದ್ದರಿಂದ ಅವರ ಸಮ್ಮುಖದಲ್ಲಿ ಹೇಳಿದರೆ ಆಯಿತು, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇಬ್ಬರು ಸಚಿವರು ಸದನದಲ್ಲಿ ಇದ್ದಾರೆ, ಸದನದಲ್ಲಿ ಅವರಿಂದ ಉತ್ತರವನ್ನು ಕೊಡಿಸಿ, ಅಷ್ಟೇ ಸಾಕು. ಈ ಸಂಜೆಯೊಳಗೆ ನಾವು with draw ಮಾಡುತ್ತೇವೆಂದರೆ ಮುಗಿದು ಹೋಯಿತು.

ಶ್ರೀ ಕೆ.ಜಿ.ಬೋಪಯ್ಯ: ಸುತ್ತೋಲೆಯನ್ನು with draw ಮಾಡಿದ ಆದೇಶವನ್ನು ಈ ಸದನದ ಮುಂದೆ ಇಡಬೇಕು.

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ವಿರೋಧ ಪಕ್ಷದ ನಾಯಕರಿಂದ ಹಿಡಿದು ಎಲ್ಲರೂ ಪ್ರಸ್ತಾಪಿಸಿದ್ದಾರೆ. ಪ್ರಸ್ತಾಪದ ನಂತರ ನಾವು with draw ಮಾಡುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟ ಮೇಲೆ ಅದೇನು ದೊಡ್ಡ ಈ ದೇಶದ ಸಂವಿಧಾನದಲ್ಲಿ ಬರುತ್ತದೆಯೇ? ಕೇವಲ with draw ಮಾಡಲು ಎಷ್ಟು ಸಮಯ ಬೇಕು?

ಅಧ್ಯಕ್ಷರು: ಈಗ ಕಂದಾಯ ಸಚಿವರು. ನಿನ್ನೆಯೂ ಒಂದು ಪ್ರಸ್ತಾಪವಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್:ಇವತ್ತು with draw ಮಾಡಿರುವ ಆದೇಶವನ್ನು ಈ ಸದನದ ಮುಂದೆ ಮಂಡಿಸುತ್ತೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: with draw ಮಾಡಿರುವ ಆದೇಶವನ್ನು ಈ ಸದನದ ಮುಂದೆ ಇಡಬೇಕು ಅಧ್ಯಕ್ಷರೇ.

(ಗೊಂದಲ)

ಅಧ್ಯಕ್ಷರು: ಈಗ ಎಲ್ಲಾ ನಿಂತುಕೊಂಡು ಮಾತನಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ.ಶ್ರೀನಿವಾಸ ಗೌಡ: ಅವರ ಕಾರ್ಯದರ್ಶಿಗಳು order ಕೊಡಬೇಕಲ್ಲವೇ?

ಅಧ್ಯಕ್ಷರು: ಈಗ ಅರಣ್ಯ ಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ದಿನೇಶ್ ಗುಂಡುರಾವ್: ಒಂದು ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕಾಗಲಿಲ್ಲವೆಂದರೆ ಏನು ಅಧ್ಯಕ್ಷರೇ?

ಶ್ರೀ ಎನ್.ಧರ್ಮಸಿಂಗ್: ಸದನದಲ್ಲಿ ನಿನ್ನೆ ಪ್ರಸ್ತಾಪ ಮಾಡಿದ್ದೇವೆ. ಇಲ್ಲಿ ಗೃಹ ಸಚಿವರು ಏನು ಹೇಳಿದರೆಂದರೆ, ಮುಖ್ಯಮಂತ್ರಿಗಳು ಈ ರೀತಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ನಾನು ಇವತ್ತೇ ಮುಖ್ಯ ಕಾರ್ಯದರ್ಶಿಯವರ

ಹತ್ತಿರ ಮಾತನಾಡುತ್ತೇನೆ. ಅದು ಕೊಡಗಿಗೆ ಸಂಬಂಧಪಟ್ಟಂತೆ, ಕಂದಾಯ, ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲಾ .. ನಾವು ನಿಮ್ಮ ಪರವಾಗಿ ಕೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು: ನಾನು ನಿಮ್ಮ actions ಅನ್ನು ಈಗ ಬಹಳ ಗಂಭೀರವಾಗಿ view ಮಾಡುತ್ತೇನೆ. ನೀವೇನೋ ತಿಳಿದುಕೊಂಡು ಬಿಟ್ಟಿದ್ದೀರಿ. No, No, ನೀವು ನಿಮ್ಮ ಸೀಟುಗಳಿಗೆ ಹೋಗಿ. ನೋಡಿ, ನೀವು ಯಾವಾಗಲೋ ಬರುತ್ತೀರಿ, ನಿನ್ನೆ ಪ್ರಸ್ತಾಪವಾದಾಗ ನೀವಿರಲಿಲ್ಲ. ಯಾವಾಗಲೋ ಬರುತ್ತೀರಿ, ನಿಂತುಕೊಂಡು ಏನೋ ಮಾತನಾಡುತ್ತೀರಿ. ನಿಮ್ಮ ಸ್ಥಾನಗಳಿಗೆ ಹೋಗಿ.

(ಹೆಚ್.ಡಿ.ಬಸವರಾಜ್ , ಕೆ.ಜಿ.ಬೋಪಯ್ಯ, ದಿನೇಶ್ ಗುಂಡೂರಾವ್ ಸದನದ ಬಾವಿಗೆ ಪ್ರವೇಶ ಮಾಡಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ಏನಿದು, ಪ್ರತಿಯೊಂದಕ್ಕೂ ಒಂದು ಮಿತಿಯಿದೆ, ಬಸವರಾಜ್ ನನಗೆ ಅರ್ಥವಾಗುವುದಿಲ್ಲ. ನೀವು ದೊಡ್ಡ ಧ್ವನಿಯಲ್ಲಿ ಮಾತನಾಡುತ್ತಿದ್ದೀರಿ, ಕೇಳಿ ದಯಮಾಡಿ, ಈಗ ರೆವೆನ್ಯೂ ಮಿನಿಸ್ಟರ್ ಹೇಳಿದರು, ನಂತರ ಅರಣ್ಯ ಸಚಿವರಿಗೆ ತಾವೇನು ಹೇಳುತ್ತೀರಿ ಎಂದು ನಾನೇ ಕೇಳಿದ್ದೇನೆ. ಅವರು ಏನು ಹೇಳುತ್ತಾರೆಂದು ಕೇಳೋಣ, ಅದರಿಂದಲೂ ಸಮಾಧಾನವಾಗದಿದ್ದರೆ 12.30 ಗಂಟೆಗೆ ಮುಖ್ಯಮಂತ್ರಿಗಳು ಬರುತ್ತಾರೆ, ಆಗ ಕೇಳಿ, ಅದನ್ನು ಬಿಟ್ಟು ಸುಮ್ಮನೆ ಏತಕ್ಕೆ ನೀವು ಹೀಗೆ ಮಾಡುತ್ತೀರೆಂಬುದು ನನಗೆ ಅರ್ಥವಾಗುತ್ತಿಲ್ಲ. ನಿಮಗೆ ಸಮಸ್ಯೆ ಬಗೆಹರಿಯಬೇಕು ಅಲ್ಲವೇನಪ್ಪಾ? ಇವರಿಬ್ಬರು ಸಚಿವರು ನಿಮಗೆ ಉತ್ತರ ಕೊಡಲಿ, ಆದರಿಂದ ನಿಮಗೆ ತೃಪ್ತಿಯಾಗದಿದ್ದರೇ, ದಯಮಾಡಿ ಕೇಳಿ. ಮುಖ್ಯಮಂತ್ರಿಗಳು 12.30 ಗಂಟೆಯ ಮೇಲೆ ಬರುತ್ತಾರೆ.

ಅಧ್ಯಕ್ಷರು: ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ. ಮೊದಲು ನಿಮ್ಮ ಆಸನಗಳಿಗೆ ಹೋಗಿ. ಅವರು ಉತ್ತರ ಕೊಡುತ್ತಿದ್ದಾರೆ. ಇವರು ಉತ್ತರ ಕೊಡಿ ಎಂದು ಹೇಳುತ್ತೇನೆ. ಅಷ್ಟಕ್ಕೂ ಸಮಾಧಾನವೇ ಇಲ್ಲದೇ ಇದ್ದರೆ ನಾವೇನು ಮಾಡುವುದು? ನಿಮಗೆ ನಿಮ್ಮ ಸಮಸ್ಯೆ ಪರಿಹಾರಕ್ಕಿಂತ ಬೇರೆ ಉದ್ದೇಶ ಇದೆ. ನಿಮ್ಮದೇನು ಉತ್ತರ. ಸರಿಯಾಗಿ ಹೇಳಿ. ಸರಿಯಾಗಿ ಹೇಳಿ ಆದೇಶವನ್ನು ವಾಪಸ್ ತೆಗೆದುಕೊಂಡಿದ್ದೀರಾ ಅಥವಾ ಇಲ್ಲವಾ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಆದೇಶವನ್ನು ವಿತ್ ಡ್ರಾ ಮಾಡಿರುವುದನ್ನು ನಾನು ಈ ಸದನದಲ್ಲಿ ಸಾಯಂಕಾಲದೊಳಗೆ ಸಬ್ಮಿಟ್ ಮಾಡುತ್ತೇನೆ.

ಅಧ್ಯಕ್ಷರು: ಈಗ ಅರಣ್ಯ ಮಂತ್ರಿಗಳು ನಿಮ್ಮ ಇಲಾಖೆಗೆ ಸಂಬಂಧಪಟ್ಟ ಆದೇಶವನ್ನು ವಾಪಸ್ ತೆಗೆದುಕೊಂಡಿದ್ದೀರಾ? ತೆಗೆದುಕೊಳ್ಳುತ್ತೀರಾ? ಏನು ಸ್ಪಷ್ಟವಾಗಿ ಹೇಳಿ. ಅಲ್ಲಿ ಏನಾಗಿದೆ ಎಂದರೆ ನಿಮ್ಮ ಮುಖ್ಯಮಂತ್ರಿಗಳು ನಾವು ಮೂರು ದಿವಸದಲ್ಲಿ ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಶ್ರೀ ಸಿ.ಚೆನ್ನಿಗಪ್ಪ (ಮಾನ್ಯ ಅರಣ್ಯ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಆಧುನಿಕ ಪ್ರಪಂಚದಲ್ಲಿ ಅರಣ್ಯದ ಬಗ್ಗೆ ಹೆಚ್ಚಿನ ಕಾಳಜಿ ಇದೆ. ಇವತ್ತು ಪ್ರಪಂಚದಲ್ಲಿ ತಾಪಮಾನ ಜಾಸ್ತಿ ಆಗಿ ಜನರಿಗೆ ಅನಾರೋಗ್ಯ ಜಾಸ್ತಿ ಆಗುತ್ತದೆಂದು ಹೇಳಿ ಯೋಚನೆ ಮಾಡಿ ಪರ ರಾಷ್ಟ್ರದ ಎಲ್ಲಾ ದೇಶಗಳು ಇವತ್ತು ಒಂದು ಎಕರೆಗೆ 10 ಲಕ್ಷ ರೂಪಾಯಿ ಕೊಡುತ್ತೇವೆ, ನೀವು ಅರಣ್ಯ ಬೆಳೆಸಿ ಎಂದು ಹೇಳಿ ಮಾನವನ ಆರೋಗ್ಯ ಕಾಪಾಡುವಂತಹ ಸಮಯದಲ್ಲಿ Supreme Court ಇದರ ಬಗ್ಗೆ ಒಂದು ಹೆಚ್ಚಿನ ಕಾಳಜಿ ಇಟ್ಟುಕೊಂಡು ಇವತ್ತು ಒಂದು High- Power Committee ಮಾಡಿದ್ದಾರೆ. ಆ ಕಮಿಟಿಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಅರಣ್ಯ ಸಚಿವರು ಎಲ್ಲರೂ ನಾವು ಹೇಳುತ್ತೇವೆ. ಅವರ ಹಾಗೆ ನಮ್ಮಲ್ಲೂ ಕಾಡು ಇದೆ. ನಮ್ಮ ರೈತರು ಇದ್ದಾರೆ. ನಾವು ಬಿಟ್ಟು ಕೊಡಬೇಕು, ಆ ಸರ್ಕ್ಯುಲರ್ ವಾಪಸ್ ತೆಗೆದುಕೊಳ್ಳಬೇಕು, ಒಪ್ಪಿಕೋಳ್ಳುತ್ತೇನೆ, ಇಲ್ಲವೆಂದಲ್ಲ. ಆದರೆ ಈ ಅರಣ್ಯ ಇಲಾಖೆಯ ಎಲ್ಲಾ ವ್ಯವಹಾರಗಳು Supreme Court ನ ಕಂಟ್ರೋಲ್ ಇದ್ದ ಕಾರಣ High- Power Committee ಯಿಂದ permission ತೆಗೆದುಕೊಂಡು ನಾವು ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಮಾನ್ಯ ಕಂದಾಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ನಮ್ಮ ಇಲಾಖೆಯಲ್ಲಿ ಅವರಿಬ್ಬರೂ ಒಪ್ಪಿಕೊಂಡ ನಂತರ High- Power Committee ಗೆ ಬರೆಯಬೇಕು. ಇಲ್ಲದಿದ್ದರೆ ಅದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ನಾವು ಈಗ ಬರೆದಿದ್ದೇವೆ. ಅದು ಬಂದ ತಕ್ಷಣ ಅದರ ಬಗ್ಗೆ ನಾವು ಚಿಂತನೆ ಮಾಡಿ, Supreme Court ಮತ್ತು High- Power Committee permission ಕೊಟ್ಟ ಮೇಲೆ ಮಾಡಬಹುದು. ಇಲ್ಲದಿದ್ದರೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಡಿ.ಬಸವರಾಜ್:– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಒಂದು ವಿಚಾರವನ್ನು ನಾನು ಹೇಳಲು ಅವಕಾಶ ಕೊಡಬೇಕು.

ಶ್ರೀ ಕೆ.ಜಿ.ಬೋಪಯ್ಯ: ಆಗುವುದಿಲ್ಲ ಎಂದರೆ ಹೇಗೆ?

ಶ್ರೀ ಹೆಚ್.ಡಿ.ಬಸವರಾಜ್:– ಈ ವಿಚಾರದಲ್ಲಿ ಒಂದು ಅವಕಾಶವನ್ನು ಕೊಡಬೆಕು. ಸತ್ಯವಾದಂತಹ ಸಂಗತಿಯನ್ನು ಹೇಳಬೇಕು.

ಶ್ರೀ ಕೆ.ಜಿ.ಬೋಪಯ್ಯ ಕೋರ್ಟಿನ ವಿಚಾರಕ್ಕೂ ಇದಕ್ಕೂ ಯಾವ ಸಂಬಂಧನೂ ಇಲ್ಲ. ಇದು ಸರಿಯಲ್ಲ.

ಶ್ರೀ ಹೆಚ್.ಡಿ.ಬಸವರಾಜ್:– ಇಲ್ಲಿ Supreme Court ನ ವಿಚಾರ ತರುವಂತಹ ಅವಶ್ಯಕತೆ ಇಲ್ಲ ಎಂದು ನನ್ನ ಅಭಿಪ್ರಾಯ ಇದೆ. ಒಂದು ವಿಚಾರವನ್ನು ಹೇಳಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಹೇಳುತ್ತಿದ್ದೇನೆ. ಈ ಒಂದು ವಿಚಾರದಲ್ಲಿ ಸನ್ಮಾನ್ಯ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ರಾಮಚಂದ್ರ ಗೌಡರ ನೇತೃತ್ವದಲ್ಲಿ ಇದೇ ವಿಧಾನ ಸೌಧದಲ್ಲಿ ಒಂದು ಸಭೆ ನಡೆಯಿತು. ಆ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರು ಇದ್ದರು. ಇಲಾಖೆಗೆ ಸಂಬಂಧಪಟ್ಟಂತಹ ಕಾರ್ಯದರ್ಶಿಗಳು ಇದ್ದರು. ಮತ್ತೆ ಮಾನ್ಯ ಸಚಿವರಾದಂತಹ ಚೆನ್ನಿಗಪ್ಪನವರೂ ಇದ್ದರು. ಮಾನ್ಯ ಚೆನ್ನಿಗಪ್ಪನವರು ಆ ಸಭೆಯಲ್ಲಿ ತತ್‌ಕ್ಷಣವೇ ವಿತ್‌ಡ್ರಾ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದಾರೆ. ಆ ದಾಖಲಾತಿಯನ್ನು ತಾವು ಕೇಳಿದರೆ ನಾನು ಮಂಡಿಸಲಿಕ್ಕೆ ಇಚ್ಚೆ ಪಡುತ್ತಿದ್ದೇನೆ. ಆ ನಡುವಳಿಕೆಯಲ್ಲಿ ಸನ್ಮಾನ್ಯ ಅರಣ್ಯ ಸಚಿವರಾದಂತಹ ಚೆನ್ನಿಗಪ್ಪನವರು ತಕ್ಷಣವೇ ಆದೇಶವನ್ನು ವಾಪಸ್ ಪಡೆಯಿರಿ ಎಂದು ಹೇಳಿದ್ದಾರೆ. ಹಾಗೆ ಹೇಳಿರುವಾಗ ಈಗ ಮತ್ತೆ ಸುಪ್ರೀಂ ಕೋರ್ಟಿಗೆ ಹೋಗಬೇಕೆಂದು ಅಧಿಕಾರಿಗಳು ತಪ್ಪು ದಾರಿಗೆ ಹೇಳುತ್ತಿದ್ದಾರೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಚೆನ್ನಿಗಪ್ಪನವರನ್ನು ಕೇಳಿದ ಮೇಲೆ ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ ಅವರು ಬರಲಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿಗೂ ಇದಕ್ಕೂ ಏನು ಸಂಬಂಧ?

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಚೆನ್ನಿಗಪ್ಪನವರನ್ನು ಕೇಳಿದರೆ ಸಮಾಧಾನ ಆಗುತ್ತದಾ? ಅವರ ಪಾರ್ಟು ಇದ್ದದನ್ನು ಹೇಳಿದ್ದಾರೆ.

ಶ್ರೀ ಹೆಚ್.ಡಿ.ಬಸವರಾಜ್:– ಜಮ್ಮಾ ಬಾಣೆ ಲ್ಯಾಂಡ್ ಸರ್ಕಾರದ್ದು ಅಲ್ಲ ಸಾರ್. ಸರ್ಕಾರದ್ದು ಆದರೆ ನೀವು ಸುಪ್ರೀಂ ಕೊರ್ಟಿಗೆ ಬೇಕಾದರೂ ಹೋಗಲಿ, ಬೇರೆಯದಕ್ಕಾದರೂ ಹೋಗಲಿ.

ಅಧ್ಯಕ್ಷರು: 12.30ಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಇವರ ಉತ್ತರದಿಂದ ಸಮಾಧಾನವಾಗಿಲ್ಲ. ಮಾನ್ಯ ಮಂತ್ರಿಗಳು ಬಂದ ಮೇಲೆ ನೀವು ಪ್ರಸ್ತಾಪ ಮಾಡಿ, ನಾನು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್:– ಜಮ್ಮಾ ಬಾಣೆ ಲ್ಯಾಂಡ್ ಖಂಡಿತವಾಗಿ ಸರ್ಕಾರದಲ್ಲ. ಸರ್ಕಾರಿ ಸ್ವಾಮ್ಯದ ಹಕ್ಕು ಅದರ ಮೇಲೆ ಬರುವುದಿಲ್ಲ. ಸುಪ್ರೀಂ ಕೋರ್ಟ್ ಅದರ ಮೇಲೆ ಯಾವುದೇ ರೀತಿ ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಜಿ.ಬೋಪಯ್ಯ: ಸುಪ್ರೀಂ ಕೋರ್ಟಿನ ವಿಚಾರಕ್ಕೂ ಸರ್ಕ್ಯುಲರ್‌ಗೂ ಯಾವುದೇ ಸಂಬಂಧ ಇಲ್ಲ.

ಅಧ್ಯಕ್ಷರು: ಮಾನ್ಯ ಚೆನ್ನಿಗಪ್ಪನವರೇ, ಮನ್ಯ ಮುಖ್ಯಮಂತ್ರಿಗಳು ಬರಲಿ, ದಯಮಾಡಿ ಕುಳಿತುಕೊಳ್ಳಿ. ಏಕೆ ಸುಮ್ಮನೇ?

ಶ್ರೀ ಸಿ.ಚೆನ್ನಿಗಪ್ಪ:– ಅವತ್ತು ಮೀಟಿಂಗ್ ಆಯಿತು. ಮೀಟಿಂಗ್ ಆದ ಮೇಲೆ ನಾವು ಆಯಿತು, ಅದನ್ನು ಯೋಚನೆ ಮಾಡೋಣ ಎಂದು ಹೇಳಿದ ಮೇಲೆ ನಮ್ಮ ಅಧಿಕಾರಿಗಳು ಒಂದು clarification ಕೇಳಿದ್ದಾಗ, ನಾವು ಒಂದು ಲೆಟರ್ ಬರೆದವು. ಹೈಪವರ್ ಕಮಿಟಿಯವರು ಅದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ ಎಂದು ನಮಗೆ ಲೆಟರ್ ಕಳುಹಿಸಿಕೊಟ್ಟಾಗ ಅದರ ಬಗ್ಗೆ ನಾವು ಈಗ ಏನು ಮಾಡಬೇಕೆಂದು ಇಂತನೆ ಮಾಡುತ್ತಿದ್ದೇವೆ. ಅದು ಬರುವವರೆಗೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಜಿ.ಬೋಪಯ್ಯ: ಈಗ ಸುಪ್ರೀಂ ಕೋರ್ಟ ಜಡ್ಜ್ ಮೆಂಟ್ ಯಾವಾಗ ಆಗಿದ್ದು? ಈ ಸುತ್ತೋಲೆ ಹೊರಡಿಸಿದ್ದು ಯಾವಾಗ? ಸುಪ್ರೀ ಕೋರ್ಟಿನ ಆದೇಶಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ದಿನೇಶ್ ಗುಂಡೂರಾವ್: ಜಮ್ಮಾ ಬಾಣೆ ಸರ್ಕಾರದ್ದು ಅಲ್ಲ.

ಶ್ರೀ ಹೆಚ್.ಡಿ.ಬಸವರಾಜ್:– ನೀವು ಇಲ್ಲದೇ ಇರುವುದನ್ನು ಸುಪ್ರೀಕೋರ್ಟಿಗೆ ಏಕೆ ಕಳುಹಿಸುತ್ತೀರಿ?

ಅಧ್ಯಕ್ಷರು: ರೀ ಕೂಡಿ.

ಶ್ರೀ ಹೆಚ್.ಡಿ.ಬಸವರಾಜ್:– ಇದು ಸರ್ಕಾರಿ ಜಮೀನಲ್ಲ ಸಾರ್.

ಅಧ್ಯಕ್ಷರು: ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರು ಹೇಳುತ್ತಿದ್ದರು. ನೀವ್ಯಾಕೆ ಮಾನ್ಯ ಚೆನ್ನಿಗಪ್ಪನವರನ್ನು ಕರೆದಿರಿ?

ಅಧ್ಯಕ್ಷರು: ನಾನು ಹೇಳಿದ್ದೇನೆ,ಇದರಿಂದ ತೃಪ್ತರಾಗದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಸಹ ಬಂದಾಗ ಪ್ರಸ್ತಾಪ ಮಾಡಿ. ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ ಮೇಲೂ ಏಕೆ ಈ ತರಹ ಮಾಡುತ್ತಿದ್ದೀರಿ? ನಿಮ್ಮ ಸಮಸ್ಯೆ ನಿವಾರಣೆ ಆಗಬೇಕು. ಸುಮ್ಮನೇ ದಯಮಾಡಿ ಸಮಯ ಹಾಳು ಮಾಡಬೇಡಿ. ಆಯಿತು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಬರಲಿ. ಈಗ ಒಂದು ಪ್ರಕಟಣೆ ಇದೆ.

3.ಪ್ರಕಟಣೆ:–

ವಿಷಯ: 2007ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ) ವಿಧೇಯಕ ಮತ್ತು ಇತರೆ ವಿಧೇಯಕಗಳನ್ನು ವಿಧಾನ ಪರಿಷತ್ತು ಅಂಗೀಕರಿಸುವುದರ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯಿಂದ ಬಂದಿರುವ ಸಂದೇಶದಲ್ಲಿ ದಿನಾಂಕ 06.08.2007ರಂದು ಕರ್ನಾಟಕ ವಿಧಾನ ಪರಷತ್ತಿನ ಕಾರ್ಯ ವಿಧಾನ ಮತ್ತು ನಡುವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2007ನೇ ಸಾಲಿನ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.